ಓ.ಎಸ್ಃ 10-2015

ಪಿ. ಡಬ್ಲ್ಯೂ ಃ 03

**ಸಾಕ್ಷಿಗೆ ದಿನಾಂಕ 05.01.2021 ರಂದು ಪ್ರಮಾಣ ವಚನ ನೀಡಲಾಯಿತು.**

**ಪಾಟೀಸವಾಲುಃ ಪ್ರತಿವಾದಿ ಪರ ವಕೀಲರಿಂದ**

ದಾವ ಷೆಡ್ಯೂಲ್ ಸ್ವತ್ತಿ ನ ಕಂದಾಯ ದಾಖಲೆಗಳನ್ನು ನೋಡಿಲ್ಲ. 1987 ರಿಂದ ಸಿದ್ದಮ್ಮ ರವರು ದಾವ ಷೆಡ್ಯೂಲ್ ಸ್ವತ್ತಿನಲ್ಲಿ ಸ್ವಾದೀನದಲ್ಲಿರುತ್ತಾರೆ. ನಾನು ದಾಖಲೆಗಳನ್ನು ನೋಡಿಲ್ಲ. ಓ ಎಸ್ 122/1986 ಜಾರಿ ಸಂ. 134/1986 ರ ದಾಖಲೆಗಳನ್ನು ನಾನು ನೋಡಿಲ್ಲ. ದಿ. 18.06.1987 ರಲ್ಲಿ ಅದ ಹರಾಜು ಪ್ರಕ್ರಿಯೆಯಲ್ಲಿ ನಾನು ಹಾಜರಿದ್ದೆನು ನಾನು ಯಾವುದೇ ಬಿಡ್ಡನ್ನು ಕೂಗಿಲ್ಲ. ದಿ. 28.11.1988 ರಲ್ಲಿ ಆದ ಕ್ರಯಪತ್ರವನ್ನು ನಾನು ನೋಡಿಲ್ಲ, ಕ್ರಯ ಪತ್ರದ ಬಗ್ಗೆ ನಾನು ತಿಳಿದುಕೊಂಡಿರುತ್ತೇನೆ. ನನ್ನ ಮುಖ್ಯ ವಿಚಾರಣ ಪ್ರಮಾಣ ಪತ್ರದಲ್ಲಿ ಬರೆದ ಅಂಶಗಳ ಬಗ್ಗೆ ನನಗೆ ತಿಳುವಳಿಕೆ ಇದ್ದಿದ್ದರಿಂದ ಅದನ್ನು ನಾನು ನಮೂದಿಸಿರುತ್ತೇನೆ. 1987 ರಲ್ಲಿ ದಾವ ಷೆಡ್ಯೂಲ್ ಸ್ವತ್ತಿನ ಸ್ವಾಧೀನವನ್ನು ಸಿದ್ದಮ್ಮ ರವರಿಗೆ ನೀಡಿರುತ್ತಾರೆ.

ಯಾರು ಯಾವ ದಿನಾಂಕ ಹಾಗೂ ಯಾವ ಸ್ಥಳದಲ್ಲಿ ಸಿದ್ದಮ್ಮ ರವರಿಗೆ ದಾವ ಷೆಡ್ಯೂಲ್ ಸ್ವತ್ತಿನ ಸ್ವಾಧೀನವನ್ನು ವಹಿಸಿಕೊಟ್ಟಿರುತ್ತಾರೆ ನನಗೆ ಗೊತ್ತಿಲ್ಲ. ದಾವ ಷೆಡ್ಯೂಲ್ ಸ್ವತ್ತಿನಲ್ಲಿ ಈಗಲೂ ಪ್ರತಿವಾದಿಗಳು ಸ್ವಾಧೀನದಲ್ಲಿದ್ದಾರೆ ಎಂದರೆ ಸರಿಯಲ್ಲ. ಸಿದ್ದಮ್ಮ ರವರಾಗಲಿ ಅವರ ಗಂಡ ರಾಗಲಿ ನ್ಯಾ.ದ ಮುಖಾಂತರ ದಾವ

ಷೆಡ್ಯೂಲ್ ಸ್ವತ್ತಿನಲ್ಲಿ ಸ್ವಾಧೀನವನ್ನು ಪಡೆದುಕೊಂಡಿಲ್ಲ ಎಂದರೆ ಸರಿಯಲ್ಲ. ವಾದಿಯರು ಹೇಳಿಕೊಟ್ಟಂತೆ ನಾನು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ, ನನಗೆ ದಾವೆಯ ಯಾವುದೇ ವಿಚಾರ ಗೊತ್ತಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

ನನ್ನ ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಸಾ.ಓ.ಹೇ.ಸ.ಒ

ಅಪರ ಸಿವಿಲ್ ಜಡ್ಜ್ ಮತ್ತು ಜೆಎಂಎಫ್.ಸಿ
ಶ್ರೀರಂಗಪಟ್ಟಣ